**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**Spl.C.181/2017**

ದಿನಾಂಕ 12.06.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 44 ಪ್ರಾಸಾ -18

| | | |
|---|---|---|
| ಹೆಸರು | ಃ | ವೆಂಕಟೇಶ್ ಕೆ. |
| ತಂದೆಯ ಹೆಸರು | ಃ | ಕಾಳಪ್ಪ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ಪೊಲೀಸ್ ಇನ್ಸ್ ಪೆಕ್ಟರ್ ಮಹಿಳಾ ಪೊಲೀಸ್ ಠಾಣೆ, ರಾಮನಗರ |
| ವಾಸಸ್ಥಳ | ಃ | ರಾಮನಗರ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಜುಲೈ 2017 ರಿಂದ ಜನವರಿ 2019 ರವರೆಗೆ ನಾನು ಪಿಎಸ್ಐ ಆಗಿ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 29.08.2017 ರಂದು ರಾತ್ರಿ 10.40 ಗಂಟೆ ಸಮಯದಲ್ಲಿ ಪಿರ್ಯಾದುದಾರಾದ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದಂತಹ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಗುನ್ನೆಯನ್ನು ಕ್ರೈಂ ನಂ.303/2017 ರಲ್ಲಿ ದಾಖಲಿಸಿಕೊಂಡೆ. ಸದರಿ ದೂರು ನಿಶಾನೆ ಪಿ 12 ಇದ್ದು, ಅದನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿ ಗುರುತಿಸಿರುವ ತನ್ನ ಸಹಿಯನ್ನು ನಿಶಾನೆ ಪಿ 12(ಬಿ) ಎಂದು ಗುರುತಿಸಲಾಯಿತು. ಸದರಿ ದೂರಿಗೆ ಸಂಬಂಧಿಸಿದ ಪ್ರಥಮ ವರ್ತಮಾನ ಮಾಹಿತಿಯನ್ನು ದಾಖಲು ಮಾಡಿಕೊಂಡು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಪ್ರಥಮ ವರ್ತಮಾನ ಮಾಹಿತಿಯನ್ನು ಸಾಕ್ಷಿ ನೋಡಿ

ಗುರುತಿಸಿದ್ದು ಅದನ್ನು ನಿಶಾನೆ ಪಿ 28 ಹಾಗೂ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 28(ಎ) ಎಂದು ಗುರುತಿಸಲಾಯಿತು.

3. ದಿನಾಂಕ 30.08.2017 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಪಿರ್ಯಾದುದಾರ ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 8 ಗಂಟೆಯಿಂದ 9.30 ಗಂಟೆ ಸಮಯದಲ್ಲಿ ಸ್ಥಳ ಪಂಚನಾಮೆ ಜರುಗಿಸಲಾಗಿದೆ. ಸದರಿ ಸ್ಥಳದಲ್ಲಿ ದೊರೆತ ರಕ್ತ ಮಿಶ್ರಿತ ಮಣ್ಣು ಮತ್ತು ರಕ್ತಮಿಶ್ರಿತವಲ್ಲದ ಮಣ್ಣನ್ನು ಸಂಗ್ರಹಿಸಿ, Article No.1 and 2 ಎಂದು ಕ್ರಮಾಂಕ ನೀಡಿ, ಪ್ಯಾಕ್ ಮಾಡಿ ಮೊಹರು ಮಾಡಲಾಯಿತು. ನಂತರ ವಸ್ತುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 110/2017 ರಲ್ಲಿ ಅಳವಡಿಸಿಕೊಳ್ಳಲಾಯಿತು. ಕೃತ್ಯ ನಡೆದ ಸ್ಥಳದಲ್ಲಿ ಭಾವಚಿತ್ರಗಳನ್ನು ಸಹ ತೆಗೆಯಲಾಗಿದೆ. ಸ್ಥಳ ಪಂಚನಾಮೆ ನಿಶಾನೆ ಪಿ 13 ಇದ್ದು, ಸಾಕ್ಷಿ ಗುರುತಿಸಿರುವ ತನ್ನ ಸಹಿಯನ್ನು ನಿಶಾನೆ ಪಿ 13(ಸಿ) ಎಂದು ಗುರುತಿಸಲಾಯಿತು. ಸದರಿ ಎರಡು ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 29 ಮತ್ತು 30 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಸಂಗ್ರಹಿಸಿದ Article No.1 and 2 ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಮುದ್ದೆಮಾಲು 2 ಮತ್ತು 3 ಎಂದು ಈಗಾಗಲೇ ಗುರುತಿಸಲಾಗಿದೆ.

4. ಅದೇ ರಾಜರಾಜೇಶ್ವರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಮೃತ ಹೇಮಂತ್ ಕುಮಾರ್ ರವರ ಮೃತ ದೇಹದ ಶವ ತನಿಖೆಯನ್ನು ಚಾಸಾ 4 ರಿಂದ 6 ರವರ ಸಮಕ್ಷಮ ಕೈಗೊಳ್ಳಲಾಗಿದೆ. ಶವ ತನಿಖಾ ಸಮಯದಲ್ಲಿ ರಕ್ತ ಸಂಬಂಧಿಗಳಾದ ಚಾಸಾ 7 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡೆ. ಶವ ತನಿಖಾ ವರದಿ ನಿಶಾನೆ ಪಿ 14 ಇದ್ದು, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 14(ಬಿ) ಎಂದು ಗುರುತಿಸಲಾಯಿತು. ಶವ ತನಿಖೆಯ

ನಂತರ ವೈದ್ಯಾಧಿಕಾರಿಗಳಿಂದ ಮರಣೋತ್ತರ ಪರೀಕ್ಷೆ ಮಾಡಿಸಿ ನಂತರ ಮೃತ ದೇಹವನ್ನು ವಾರಸುದಾರರಿಗೆ ಬಿಟ್ಟು ಕೊಡಲಾಗಿದೆ. ಅದೇ ದಿನ ಸಾಕ್ಷಿ 1 ರವರ ಮುಂದುವರಿದ ಹೇಳಿಕೆಯನ್ನು ಸಹ ಪಡೆದುಕೊಂಡೆ.

5. ಈ ಪ್ರಕರಣ ಘೋರ ಪ್ರಕರಣವಾಗಿರುವ ಕಾರಣ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 45 ರವರಿಗೆ ಹಸ್ತಾಂತರಿಸಿರುತ್ತೇನೆ.

6. ಪೊಲೀಸ್ ನಿರೀಕ್ಷಕರ ಆದೇಶದನ್ವಯ ದಿನಾಂಕ 01.09.2017 ರಂದು ನಾನು ಮತ್ತು ಸಿಬ್ಬಂದಿ ನರಸಿಂಹಮೂರ್ತಿ, ವರಲಕ್ಷ್ಮೀ, ನವೀನ್ ರವರೊಂದಿಗೆ ರಾಜೇಶ್ವರಿ ಎಂಬ ಆರೋಪಿಯನ್ನು ಮಧ್ಯಾಹ್ನ 3.30 ರ ಸಮಯದಲ್ಲಿ ನೆಲಮಂಗಲ ಬಸ್ ನಿಲ್ದಾಣದಲ್ಲಿ ವಶಕ್ಕೆ ಪಡೆದು ಸಂಜೆ 4 ಗಂಟೆಗೆ ಪೊಲೀಸ್ ಠಾಣೆಗೆ ಬಂದು ತನಿಖಾಧಿಕಾರಿಗಳ ಸಮಕ್ಷಮ ಹಾಜರುಪಡಿಸಿ ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 31 ಮತ್ತು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 31(ಎ) ಎಂದು ಗುರುತಿಸಲಾಯಿತು. ಸದರಿ ಆರೋಪಿ ಇಂದು ನ್ಯಾಯಾಲಯದ ಮುಂಂದೆ ಇರುತ್ತಾರೆ.

7. ದಿನಾಂಕ 02.09.2017 ರಂದು ಸಿಬ್ಬಂದಿಯವರಾದ ಎಎಸ್ಐ ಭಾಸ್ಕರ್, ನರಸಿಂಹಮೂರ್ತಿ, ನವೀನ್ ಕುಮಾರ್, ವಿಶ್ವನಾಥ್ ರವರ ಜೊತೆ ಈ ಪ್ರಕರಣದ ಆರೋಪಿಗಳಾದ ಸಿದ್ದರಾಜು ಮತ್ತು ಅಭಿಷೇಕ್ ರವರನ್ನು ಬೆಳಿಗ್ಗೆ 7 ಗಂಟೆ ಸಮಯದಲ್ಲಿ ವಶಕ್ಕೆ ಪಡೆದು ಕೆಎ-41-ಸಿ-945 ಟಾಟಾ ಮ್ಯಾಜಿಕ್ ವಾಹನದ ಸಮೇತ ಠಾಣೆಗೆ ಕರೆತಂದು ಬೆಳಿಗ್ಗೆ 7.45 ಗಂಟೆಗೆ ಆರೋಪಿಗಳು ಮತ್ತು ವಾಹನವನ್ನು ತನಿಖಾಧಿಕಾರಿಗಳ ಸಮಕ್ಷಮ ಹಾಜರುಪಡಿಸಿ ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 32 ಮತ್ತು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 32(ಎ) ಎಂದು

ಗುರುತಿಸಲಾಯಿತು. ಸದರಿ ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. ಅವರು ಇಂದು ನ್ಯಾಯಾಲಯದ ಮುಂದೆ ಇರುತ್ತಾರೆ. ವಾಹನವನ್ನು ಸಹ ನೋಡಿದರೆ ಗುರುತಿಸಬಲ್ಲೆ. ಸದರಿ ವಾಹನಕ್ಕೆ ಸಂಬಂಧಿಸಿದಂತೆ 4 ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 4 ರಿಂದ 7 ಎಂದು ಈಗಾಗಲೇ ಗುರುತಿಸಲಾಗಿದೆ.

**ವಾಟೀ ಸವಾಲುಃ 2ನೇ ಆರೋಪಿ ಪರವಾಗಿ ಶ್ರೀ.ಟಿಜಿ ವಕೀಲರಿಂದಃ**

8. ಪಿರ್ಯಾದುದಾರರು ಠಾಣೆಗೆ ಬಂದು ದೂರು ನೀಡಿರುತ್ತಾರೆ. ದೂರು ಸ್ವೀಕರಿಸುವುದಕ್ಕಿಂತ ಪೂರ್ವದಲ್ಲಿ ನನಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ಪಿರ್ಯಾದುದಾರನಿಗೆ ಮೃತ ವ್ಯಕ್ತಿ ರಕ್ತಸಂಬಂಧಿಯಾಗಿರುತ್ತಾರೆ. ದೂರು ಸ್ವೀಕರಿಸಿದ ನಂತರ ನಾನು ಸ್ಥಳಕ್ಕೆ ಹೋಗಿರುವುದಿಲ್ಲ.

**ಮುಂದುವರಿದ ವಾಟೀಸವಾಲಿಗೆ ಸಾಕ್ಷಿಯು ತನಗೆ ಕಡತ ಪರಿಶೀಲಿಸಲು ಸಮಯಾವಕಾಶ ಬೇಕು ಎಂದು ಕೋರಿರುವ ಕಾರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**